(ಇಂದು ದಿನಾಂಕಃ 24–10–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀ ಎಂ ಬಿ ವಿ ವಕೀಲರಿಂದ ಃ -

17) ವಾದ ಪತ್ರವು ನನ್ನ ಹಾಗೂ ನನ್ನ ಹೆಂಡತಿ ಹೆಸರಿನಲ್ಲಿ ಇರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಹೆಸರಿನಲ್ಲಿ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದ 6 ನೇ ಕಂಡಿಕೆಯಲ್ಲಿ 1 ನೇ ಪ್ರತಿವಾದಿಯು......ರಿಂದ.......... ವಿರೋಧಿಸುತ್ತಾ ಬಂದಿದ್ದು ಇರುತ್ತದೆ ಎಂದು ನಮೂದು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ವಾದ ಪತ್ರದ ಹಾತನಕಾಶೆಯನ್ನು ನನ್ನ ಹೇಳಿಕೆ ಮೇರೆಗೆ ತಯಾರಿಸಲಾಗಿರುತ್ತದೆ ಅದನ್ನು ತಜ್ಞರಿಂದ ತಯಾರಿಸಿರುವುದಿಲ್ಲ.

18) ಸಾಕ್ಷಿಗೆ ಅಸಲು ದಾವಾ ಸಂಖ್ಯೆ 55/2011 ರಲ್ಲಿ ನಾನು ನನ್ನ ಹೆಂಡತಿಯ ಪರವಾಗಿ ಮೌಕ್ತಿಯಾರ ಮೂಲಕ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸಾಕ್ಷಿಯು ಎರಡೂ ಪ್ರಕರಣಕ್ಕೆ ಸಂಬಂದವಿರುವುದಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದ 3 ನೇ ಕಂಡಿಕೆಯಲ್ಲಿ ಪಡಜಾಗ ಎಂದು ಉಲ್ಲೇಖಿಸಿರುತ್ತೇನೆ ಎಂದರೆ ಸಾಕ್ಷಿಯು ಪಡಜಾಗವಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ದಿನಾಂಕ 17-02-2022 ರಿಂದ ಇಲ್ಲಿಯವರೆಗೆ ಸುಳ್ಳು ಪ್ರಕರಣಗಳನ್ನು ದಾಖಲು ಮಾಡುತ್ತಾ ಬಂದಿರುತ್ತೇನೆ ಅಂದರೆ ಸರಿಯಲ್ಲ.

19) ನಾನು ಪ್ರತಿವಾದಿಯರಿಗೆ ತೊಂದರೆ ನೀಡಿದ ಕಾರಣ ಅವರು ದಾವಾ ಆಸ್ತಿಯ ನಿರ್ವಹಣೆ ಮಾಡದೇ ಪ್ರಕೃತಿಯ ವಿಕೋಪದಿಂದ ಉದುರಿ ಹೋಗಿರುತ್ತದೆ ಅಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಯರಿಗೆ ಸರ್ಕಾರದಿಂದ ಮನೆ ನಿರ್ಮಾಣ ಯೋಜನೆಗಳಿಂದ ಅನುಕೂಲವಾಗದಂತೆ ತಕರಾರು ಸಲ್ಲಿಸುತ್ತಾ ಬಂದಿರುತ್ತೇನೆ ಅಂದರೆ ಸರಿಯಲ್ಲ. ದ್ಯಾಮವ್ವ ತಂದೆ ಲಚಮಪ್ಪ ಕಾಳೆ ಹಾಗೂ ಯಲ್ಲವ್ವ ಲಚಮಪ್ಪ ಕಾಳೆರವರು ಒಂದೇ ಕುಟುಂಬದವರು ಎಂದರೆ ಸರಿ. ಸದರಿಯವರು ಪಾಲುವಿಭಾಗ ಮಾಡಿಕೊಂಡು ಪರಸ್ಪರ ಕಬ್ಜಾ ವಹಿವಾಟಿನಲ್ಲಿರುತ್ತಾರೆ ಅಂದರೆ ಸಾಕ್ಷಿಯು ಮೊದಲಿಗೆ ಇರಬಹುದು ಎಂದು ನುಡಿದು ನಂತರ ಸರಿಯಲ್ಲ ಎಂದು ನುಡಿಯುತ್ತಾರೆ.

20) ದಾವಾ ಆಸ್ತಿ ನನಗೆ ಮರಿಯವ್ವ ರವರು ಬಿಟ್ಟು ಕೊಟ್ಟಿರುತ್ತಾರೆ. ಮರಿಯವ್ವ ರವರಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಾಗವು ಅಡಿವೆಪ್ಪ ಕಾಳೆ ರವರ ಜಾಗ ಅಂದರೆ ಸರಿಯಲ್ಲ. ಪ್ರತಿವಾದಿಯರು ನನಗೆ ಯಾವುದೇ ಜೀವಬೆದರಿಕೆ ಹಾಕಿರುವುದಿಲ್ಲ, ಯಾವುದೇ ತೊಂದರೆ ನೀಡಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರು ಕಾನೂನು ರೀತಿಯಲ್ಲಿ ಪರವಾನಿಗೆ ಪಡೆದು ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆ ಅಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಕಾನೂನು ಬದ್ಧ ಆಸ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿದ್ದು ನೋಟಿಸ ನೀಡುವ ಪ್ರಸಂಗ ಬರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಪರಿಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ದಾವಾ ಪರಿಹಾರ ಪಡೆಯಲು ದಾವಾ ಕಾರಣ ಉಂಟಾಗಿಲ್ಲ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**